
PEER REVIEWED

# STUDIES IN KARNATAKA HISTORY AND CULTURE

Editors

Prof.R.M.Shadakshariah

Prof.Iranna Pattar



VOLUME- XIX-RESEARCH ARTICALS PRESENTED IN THE 30th SESSION OF THE KARNATAKA HISTORY CONGRESS HELD AT KARNATAK UNIVERSITY, DHARWAD

Co-ordinator
Internal Quality Assurance Cell (IQAC)
Laxmi Venkatesh Desai College,RAICHUR-03,

L.V.D.COLLEGE * RAICHUR *

PRINCIPAL
L.V.D. College, RAICHUR-03.

# VOLUME-XIX : RESEARCH ARTICALS PRESENTED IN THE 30th SESSION OF THE KARNATAKA HISTORY CONGRESS HELD AT KARNATAK UNIVERSITY, DHARWAD



| | | |
|---|---|---|
| EDITED BY | : | DR. R.M. SHADAKSHARIAH<br>DR. IRANNA PATTAR |
| PUBLISHED BY | : | THE KARNATAKA HISTORY CONGRESS ® |
| YEAR OF PUBLICATION | : | 2022 |
| PAGES | : | 700 |
| COPIES | : | 1000 |
| ISBN | : | 978-81-954061-9-7 |
| COPYRIGHT | : | THE KARNATAKA HISTORY CONGRESS |
| PRICE | : | 700/- |
| PUBLISHED BY | : | Dr. IRANNA PATTAR<br>Retd. Professor and General Secretary<br>The Karnataka History Congress<br>Department of Studies in History<br>Bangalore University, Bangalore-560 056 |
| PRINTED AT | : | Akshara Mantapa, Bangalore. |

THE PUBLICATION OF THIS VOLUME HAS BEEN FINANCIALLY SUPPORTED BY THE KARNATAKA STATE ARCHIVES DEPARTMENT



THE RESPONSIBILITY FOR THE FACTS STATED OR OPINIONS EXPRESSED IS ENTIRELY OF THE AUTHORS AND NOT OF THE KARNATAKA STATE ARCHIVES DEPARTMENT OR THE KARNATAKA HISTORY CONGRESS

# ಗಬ್ಬೂರಿನ ನಿರ್ಲಕ್ಷಿತ ವೈಷ್ಣವ ದೇವಾಲಯ

ಚನ್ನಾರೆಡ್ಡಿ ಎಸ್
ಪಿಹೆಚ್.ಡಿ. ಸಂಶೋಧನಾರ್ಥಿ, ಇತಿಹಾಸ ಮತ್ತು ಪುರಾತತ್ವ ಅಧ್ಯಯನ ವಿಭಾಗ,
ವಿಜಯನಗರ ಶ್ರೀ ಕೃಷ್ಣದೇವರಾಯ ವಿಶ್ವವಿದ್ಯಾಲಯ, ಜ್ಞಾನ ಸಾಗರ ಆವರಣ, ವಿನಾಯಕ ನಗರ, ಬಳ್ಳಾರಿ-583105

**1) ಪೀಠಿಕೆ:**

ಎಡದೊರೆಯ ನಾಡು ಎಂದೇ ಪ್ರಖ್ಯಾತವಾದ ರಾಯಚೂರು ಜಿಲ್ಲೆ ಐತಿಹಾಸಿಕವಾಗಿ ತನ್ನದೇ ಆದ ಅಸ್ತಿತ್ವವನ್ನು ಪಡೆದು ಪ್ರಸಿದ್ಧವಾಗಿದೆ. ಪುರಾಣ ಪ್ರಸಿದ್ಧವೂ, ಇತಿಹಾಸ ಪ್ರಸಿದ್ಧವೂ ಆಗಿರುವ ದೇವದುರ್ಗ ತಾಲೂಕಿನ ಗಬ್ಬೂರ ಗ್ರಾಮವು ದೇವಾಲಯಗಳ ಪಟ್ಟಣ ಎಂದು ಖ್ಯಾತಿಯಾಗಿದ್ದು, ಪಟ್ಟಣದಲ್ಲಿ 30 ದೇವಾಲಯಗಳು 28 ಶಿಲಾಶಾಸನಗಳು ದೊರೆತಿದ್ದು, ಚಾರಿತ್ರಿಕ ಮಹತ್ವವನ್ನು ಹೊಂದಿದೆ. ಗಬ್ಬೂರು ಕಲ್ಯಾಣ ಚಾಲುಕ್ಯರ ಕಾಲದಲ್ಲಿ ಒಂದು ಅಗ್ರಹಾರ. ಇಲ್ಲಿ ಕಲ್ಯಾಣ ಚಾಲುಕ್ಯರ ಆಳ್ವಿಕೆ ಕಾಲದಲ್ಲಿ ಅನೇಕ ದೇವಾಲಯಗಳನ್ನು ನಿರ್ಮಿಸಲಾಗಿದೆ. ಗಬ್ಬೂರಿನ ಕೆಲವು ಪ್ರಮುಖ ದೇವಾಲಯಗಳೆಂದರೆ ಹನುಮಾನ್, ಈಶ್ವರ, ವೆಂಕಟೇಶ್ವರ, ಮಹಾನಂದೀಶ್ವರ, ಮೇಲುಶಂಕರ, ಏಳುಬಾವಿ ಬಸವಣ್ಣ ಮತ್ತು ಬೂದಿಬಸವೇಶ್ವರ ದೇವಾಲಯಗಳಿವೆ. ಹಾಗೆಯೇ ಇಲ್ಲಿ ಚಂಡಿದರ್ವಾಜ ಎಂಬ ಹಳೆಯ ದ್ವಾರವು ಅನೇಕ ದೇವಾಲಯಗಳು ಶಾಸನಗಳು ಕಂಡು ಬಂದಿವೆ.

ಇಲ್ಲಿನ ಶಾಸನಗಳು ಮತ್ತು ದೇವಾಲಯದ ವಾಸ್ತುಶಿಲ್ಪಗಳು ಅಂದಿನ ಗತವೈಭವವನ್ನು ನೆನಪಿಗೆ ತರುತ್ತವೆ. ವಿಗ್ರಹಗಳು, ಕಲ್ಯಾಣಿ, ಬಾವಿ, ವೀರಗಲ್ಲು, ಮಾಸ್ತಿಕಲ್ಲುಗಳು ಈ ಗ್ರಾಮದ ಸಾಂಸ್ಕೃತಿಕ ಮಹತ್ವವನ್ನು ಎತ್ತಿತೋರಿಸುತ್ತವೆ. ಭೂಗರ್ಭದ ಮಣ್ಣಲ್ಲಿ ಹೂತುಹೋಗಿದ್ದ ದೇವಾಲಯವೊಂದನ್ನು ಇತ್ತೀಚಿಗೆ ಊರಿನ ತರುಣರು ಬಯಲಿಗೆ ತಂದಿದ್ದಾರೆ. ಅದರ ಕಲೆ ಮತ್ತು ವಾಸ್ತು ಶಿಲ್ಪದ ವೈಶಿಷ್ಟ್ಯವನ್ನು ಹೇಳುವುದು ಈ ಲೇಖನದ ಉದ್ದೇಶವಾಗಿದೆ.

**2) ಚಾರಿತ್ರಿಕ ಹಿನ್ನಲೆ:**

ಈ ಗ್ರಾಮದ ಪ್ರಾಚೀನತೆ ಹಾಗೂ ಐತಿಹಾಸಿಕ ಹಿನ್ನಲೆಯನ್ನು ಗಮನಿಸುವುದಾದರೆ ಕಲ್ಯಾಣ ಚಾಲುಕ್ಯರು, ಕಲಚೂರಿಗಳು, ಸೇವುಣರು, ವಿಜಯನಗರ ಸಾಮ್ರಾಜ್ಯ ಮುಂತಾದವರ ಆಳ್ವಿಕೆಗೆ ಒಳಪಟ್ಟ ಗ್ರಾಮವಾಗಿತ್ತು. ಇಲ್ಲಿ ಅನೇಕ ಶಾಸನಗಳು, ದೇವಾಲಯುಗಳು, ವಿಗ್ರಹಗಳು, ಕಲ್ಯಾಣಿ, ಬಾವಿ, ವೀರಗಲ್ಲು, ಮಾಸ್ತಿಕಲ್ಲು ಮುಂತಾದ ಅನೇಕ ವಾಸ್ತುಶಿಲ್ಪಗಳು ಕಂಡು ಬರುತ್ತವೆ. ತನ್ನದೇ ಆದ ಐತಿಹಾಸಿಕ ಚಾರಿತ್ರಿಕ ಹಿನ್ನಲೆಯನ್ನು ಹೊಂದಿದೆ.

**3) ಸ್ಥಳನಾಮ:**

ರಾಯಚೂರು ಜಿಲ್ಲೆ ದೇವದುರ್ಗ ತಾಲೂಕಿನ ಒಂದು ಗ್ರಾಮ, ಐತಿಹಾಸಿಕಸ್ಥಳ, ಹೋಬಳಿ ಕೇಂದ್ರವಾದ ಇದು ದೇವದುರ್ಗಕ್ಕೆ ಆಗ್ನೇಯ ದಿಕ್ಕಿನ ರಾಯಚೂರು ಮಾರ್ಗದಲ್ಲಿ ಬರುತ್ತದೆ. ಈ ಗ್ರಾಮಕ್ಕೆ ಗೊಬ್ಬೂರು ಎಂಬ ಹೆಸರಿದೆ. 12-13 ನೇ ಶತಮಾನಗಳಲ್ಲಿ ಗೋಪುರ ಗ್ರಾಮ ಎಂದು ಹೆಸರಾಗಿದ್ದ ಅಗ್ರಹಾರ ಮತ್ತು ವಿದ್ಯಾಕ್ಷೇತ್ರವಾಗಿತ್ತು. ಅನೇಕ ಗೋಪುರಗಳು ಇರುವುದರಿಂದ ಈ ಗ್ರಾಮಕ್ಕೆ ಗೋಪುರಪುರ ಎಂದು ಕರೆಯುತ್ತಿದ್ದರು. ಕಲ್ಯಾಣ ಚಾಲುಕ್ಯರ 6ನೇ ವಿಕ್ರಮಾದಿತ್ಯ ಕಾಲಕ್ಕೆ ಸೇರಿದ ಸು. 1109 ರ ಶಾಸನದ ಪ್ರಕಾರ ಬ್ರಹ್ಮಜಿನಾಲಯ ಎಂಬ ಜೈನ ಮಂದಿರವೊಂದು ಇಲ್ಲಿದ್ದಿತ್ತು. ಅಂದು ಈ ಊರಿಗೆ ಹಿರಿಯ ಗೊಬ್ಬೂರು ಎಂಬ ಹೆಸರಿತ್ತೆಂದು ತಿಳಿದು ಬರುತ್ತದೆ.

**4) ಭೌಗೋಳಿಕ ಹಿನ್ನಲೆ:**

ಗಬ್ಬೂರು ಗ್ರಾಮವು ರಾಯಚೂರು ಜಿಲ್ಲೆಯ ದೇವದುರ್ಗ ತಾಲೂಕಿನ ಆಗ್ನೇಯ ಭಾಗಕ್ಕೆ ಈ ಊರು 27 ಕಿ. ಮೀ ದೂರದಲ್ಲಿದ್ದು, ಕೃಷ್ಣಾ ನದಿಯಿಂದ 16 ಕಿ. ಮೀ ದೂರದಲ್ಲಿದ್ದು, ಈ ಊರಿನಲ್ಲಿ ಪಶ್ಚಿಮಕ್ಕೆ ಸೂಗೂರೇಶ್ವರ ಬೆಟ್ಟ ಮತ್ತು ಉತ್ತರಕ್ಕೆ ರತ್ನಗಿರಿ ಬೆಟ್ಟ ಎಂಬ ಎರಡು ಬೆಟ್ಟಗಳಿವೆ. ಇಲ್ಲಿನ ಸೂಗೂರೇಶ್ವರ ಬೆಟ್ಟದಲ್ಲಿ ಪ್ರಾಗೈತಿಹಾಸಿಕ ಕೆಲವು ಕುರುಹುಗಳು ಕಂಡು ಬಂದಿವೆ. ಗಬ್ಬೂರಿನ ಸುತ್ತಲು 3 ಕೆರೆಗಳು ಇದ್ದು, ಅನೇಕ ಬಾವಿಗಳು ಕೂಡ ಇಲ್ಲಿ ಕಂಡು ಬರುತ್ತವೆ. ಇದು ಅಕ್ಷಾಂಶ 16. 30 ಉತ್ತರ ಮತ್ತು ರೇಖಾಂಶ 77. 15 ಇದೆ. ಗಬ್ಬೂರಿನ ಭೂಮಿಯು ಕೆಂಪು, ಕಪ್ಪು, ಮರಳು ಮತ್ತು ಚೌಳು ಮಣ್ಣಿನಿಂದ ಕೂಡಿದೆ. ಇಲ್ಲಿನ ಪ್ರಮುಖ ಬೆಳೆಗಳಾದ ಹತ್ತಿ, ಭತ್ತ, ಗೋಧಿ, ಜೋಳ, ಸಜ್ಜೆ, ಮೆಣಸಿನಕಾಯಿ ಮುಂತಾದವುಗಳನ್ನು ಬೆಳೆಯಲಾಗುತ್ತದೆ.

# ಪರಿವಿಡಿ


| ಕ್ರ ಸಂ | ಶೀರ್ಷಿಕೆ | ಲೇಖಕರು | ಪುಟ ಸಂಖ್ಯೆ |
|---|---|---|---|
| 1 | ಸಮ್ಮೇಳನಾಧ್ಯಕ್ಷರ ಭಾಷಣ | ಡಾ. ಎಂ.ಟಿ. ಕಾಂಬಳೆ | 1 |
| 2 | Towards Inclusivity: Dalit History, Movement and its Historiography | Prof. Yagati Chinna Rao | 6 |
| 3 | ಶೈವ ಧರ್ಮಕ್ಕೆ ಕಲ್ಯಾಣದ ಚಾಲುಕ್ಯರ ರಾಣಿಯರ ಕೊಡುಗೆಗಳು | ಡಾ. ಆದಿತ್ಯ | 21 |
| 4 | ಶ್ರೀಶೈಲದ ಶಾಸನೋಕ್ತ ಮಠಗಳು | ಭೀಮಾಶಂಕರ ಆರ್.ಎಮ್.<br>ಡಾ. ಅಯ್.ಕೆ. ಪತ್ತಾರ | 25 |
| 5 | ಚಿತ್ರದುರ್ಗ ಮತ್ತು ದಾವಣಗೆರೆ ಜಿಲ್ಲೆಗಳಲ್ಲಿ ಕಲ್ಯಾಣ ಚಾಲುಕ್ಯರ ಕಾಲದ ತೆರಿಗೆ ಪದ್ಧತಿ : ಒಂದು ಶಾಸನೋಕ್ತ ಅವಲೋಕನ | ಭರತ್ ಎ.ಸಿ. | 31 |
| 6 | ಗಬ್ಬೂರಿನ ನಿರ್ಲಕ್ಷಿತ ವೈಷ್ಣವ ದೇವಾಲಯ ✓ | ಚೆನ್ನಾರೆಡ್ಡಿ ಎಸ್. | 36 ✓ |
| 7 | Inscriptional Depiction of Stories Adopted to Sannata (Exploration of Truth and Empire of Religion) | Dr. Gangadhara Daivadnya | 40 |
| 8 | ಬಂದೂಕು ವೀರಗಲ್ಲುಗಳು | ಡಾ. ಗೀತಾ ಪಾಟೀಲ | 46 |
| 9 | ವಿಜಯಪುರ ಜಿಲ್ಲೆಯ ಶಾಸನೋಕ್ತ ಜಲಾಗಾರಗಳು : ಒಂದು ಚಾರಿತ್ರಿಕ ಅಧ್ಯಯನ | ಶ್ರೀ ಗಿರೀಶ ಹನಮರೆಡ್ಡಿ<br>ಡಾ. ಕೆ.ಎಲ್.ಎನ್. ಮೂರ್ತಿ | 50 |
| 10 | ದಾವಣಗೆರೆ ಜಿಲ್ಲೆಯ ಆತ್ಮಬಲಿದಾನ ಸ್ಮಾರಕ ಶಿಲ್ಪಗಳು | ಡಾ. ಹೊನ್ನೂರಸ್ವಾಮಿ ಹೆಚ್. | 56 |
| 11 | ಕರ್ನಾಟಕದ ಕಲೆ ಮತ್ತು ವಾಸ್ತುಶಿಲ್ಪದ ಅಧ್ಯಯನಗಳು | ಡಾ. ಈರಣ್ಣ ಪತ್ತಾರ | 61 |
| 12 | Role of Imperial Cholas in the Regions of Kaveri Basins | Dr. R. Kavitha | 73 |
| 13 | ವಿಜಯಪುರ ನಗರದ ವೈಷ್ಣವ ದೇವಾಲಯಗಳ ಒಂದು ಅಧ್ಯಯನ | ಶ್ರೀ ಎಸ್.ಪಿ. ಕೋಟಿ<br>ಡಾ. ಕೆ.ಎಲ್.ಎನ್. ಮೂರ್ತಿ | 79 |
| 14 | ಹಾವೇರಿ ಜಿಲ್ಲೆಯ 'ತುರುಗೋಳ್' ಸ್ಮಾರಕಶಿಲ್ಪಗಳು | ವೈ. ಮದ್ದಾನಸ್ವಾಮಿ | 84 |
| 15 | ಶಾಸನಗಳ ಹಿನ್ನೆಲೆಯಲ್ಲಿ ದೇವಗಿರಿ ಯಾದವರ ಕಾಲದ ಜೈನ ಧರ್ಮ | ಡಾ. ಮಹಾಂತೇಶ ಮ. ಅಕ್ಕಿ | 88 |
| 16 | ಜಮಖಂಡಿ ಪರಿಸರದ ಧಾರ್ಮಿಕ ವ್ಯವಸ್ಥೆ (ಶಾಸನಗಳನ್ನು ಅನುಲಕ್ಷಿಸಿ) | ಡಾ. ಮಂಜುನಾಥ ಎಸ್. ಪಾಟೀಲ | 94 |
| 17 | Hanagallu – Temples | Shri. Moreppa H. Vaddar<br>Dr. Chandrakant N. Koligudde | 104 |
| 18 | ದೇವಗಿರಿಯ ಯಾದವರ ಕಾಲದ ಶಾಸನಗಳಲ್ಲಿ ಶೈವಪ್ರಭೇದಗಳು : ಒಂದು ಅವಲೋಕನ | ಡಾ. ಎಸ್.ಆರ್. ನಾಗಣ್ಣವರ | 107 |
| 19 | ಹಾನಗಲ್ ಪ್ರದೇಶದ ಕೆಲವು ಶಾಸನಾಧಾರಿತ ಕೆರೆಗಳು | ನಾಗರಾಜ ತಳವಾರ | 116 |
| 20 | ಬಳ್ಳಾರಿ ಹಾಗೂ ವಿಜಯನಗರ ಜಿಲ್ಲೆಯಲ್ಲಿನ ಶಾಸನ ಉಲ್ಲೇಖಿತ ಕೆರೆಗಳು | ನಾಗರತ್ನಮ್ಮ ವಿ. | 124 |
| 21 | ರಾಮತೀರ್ಥದ ಉಮಾರಾಮೇಶ್ವರ ದೇವಾಲಯ | ನಿಧಿ ಕಟ್ಟಿ | 128 |
| 22 | ಶಿಥಿಲಾವಸ್ಥೆಯಲ್ಲಿರುವ ಸಿದ್ಧೇಶ್ವರ ದೇವಾಲಯ | ಡಾ. ಪದ್ಮ ಬಿ.ಎಸ್.<br>ದಾದಾ ಖಲಂದರ್ ಭಾಷಾ ಎ. | 129 |
| 23 | ಸವದತ್ತಿ ತಾಲೂಕಿನ ಶೈವ ಶಾಸನಗಳು | ಡಾ. ಕೆ.ಎಸ್. ಪಾಟೀಲ | 131 |
| 24 | ಶಾಸನಗಳಲ್ಲಿ ಜನಪದ ಸಾಹಿತ್ಯದ ಸತ್ವ | ಡಾ. ವ್ಹಿ.ಎಲ್. ಪಾಟೀಲ | 134 |
| 25 | ಕುಂದೂರು ಐದನೂರು ನಾಡಿನ ಮುಗಂದ ಮೂವತ್ತರ ಐತಿಹಾಸಿಕ ನಾಟಕ ಶಾಲೆ | ಶ್ರೀ ಪುಲಕೇಶಿ ಭೀ. ಕಾಮಣ್ಣವರ<br>ಡಾ. ಎಸ್.ಜಿ. ಚಲವಾದಿ | 141 |
| 26 | ಉಪ್ಪಳ ಗ್ರಾಮದ ಮೂರ್ತಿಶಿಲ್ಪ ಮತ್ತು ಸ್ಮಾರಕಶಿಲ್ಪಗಳು | ರಡ್ಡೆಪ್ಪ | 143 |
| 27 | ಕಲ್ಯಾಣ ಚಾಲುಕ್ಯರ ಕಾಲದ ಶಾಸನೋಕ್ತ ಮಠಗಳಲ್ಲಿ ವಿದ್ಯಾಕೇಂದ್ರಗಳು : ಬಳ್ಳಾರಿ ಜಿಲ್ಲೆ | ರಾಘವೇಂದ್ರ ಎಸ್. | 149 |